ANNOUNCEMENT

MR. SPEAKER.—Before putting the motion for consideration I wish to announce that I have received an intimation from the Chairman, Legislative Council. It reads as follows.—

"As required by Rule 106 of the Rules of Procedure and Conduct of Business in the Karnataka Legislative Council, I send herewith the Karnataka Appropriation (Vote on Account) Bill, 1981 which has been agreed to by the Legislative Council to-day the 31st March, 1981 without amendments.

ಪಂಂತ್ರಿಗಳ ವಿವರಣೆ

ವಿಷಯ.—ರಾಜ್ಯದ ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಕೊರತೆಗೆ ಸಂಬಂಧಿಸಿದ ವಿಷಯ.

ಶ್ರೀ ಧರ್ಮಸಿಂಗ್ (ನಗರಾಭಿವೃದ್ಧಿ ಮತ್ತು ವಸತಿ ಸಚಿವರು).—ಕರ್ನಾಟಕ ರಾಜ್ಯಾದ್ಯಂತ ಬಹು ಜಿಲ್ಲೆಗಳಲ್ಲಿ ಕಳೆದ ವರ್ಷದಲ್ಲಿ ಸಾಕಾದಷ್ಟು ಮಳೆಯಾಗದೇ ಇದ್ದ ಪರಿಣಾಮವಾಗಿ ರಾಜ್ಯದ ನಾನು ಭಾಗಗಳಲ್ಲಿ ನೀರಿನ ಕೊರತೆ ಉದ್ಭವಿಸಿದೆ (ಸಮಸ್ಯೆಯನ್ನು ತೀವ್ರವಾಗಿ ಎದುರಿಸಬೇಕಾಗಿದೆ). ಪರಿಸ್ಥಿತಿಯು ನಮ್ಮೆಲ್ಲರ ತೀವ್ರ ಗಮನಸೆಳೆದಿದೆ. ಬೃಹತ್ ಸಮಸ್ಯೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಂ ಇದರ ಹಿನ್ನೆಲೆಯನ್ನು ತಿಳಿಯುವ ಅಗತ್ಯವೂ ಇದೆ.

ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ನಗರದ ಜೊತೆಗೆ ೨೪೨ ನಗರಗಳು ಮತ್ತು ಪಟ್ಟಣಗಳು ಇವೆ. ಇವಿಷ್ಟೂ ನಗರಾಡಳಿತೆಯು ವ್ಯಾಪ್ತಿಯಲ್ಲಿ ಬರುತ್ತದೆ. ಇದಿಷ್ಟೂ ಪಟ್ಟಣಗಳು ಒಟ್ಟು ಜನಸಂಖ್ಯೆಯ ೧೯೭೧ರ ಜನಗಣತಿಯ ಪ್ರಕಾರ ೫೫. ೨೫ ಲಕ್ಷ ೧೯೮೧ರ ಜನಗಣತಿಯ ಪ್ರಕಾರ ಈ ಪಟ್ಟಣಗಳ ಜನ ಸಂಖ್ಯೆ ೬೯.೮೦ ಲಕ್ಷಕ್ಕೆ ಏರಿದೆ. ಅಂದರೆ ಒಟ್ಟು ರಾಜ್ಯದ ಜನಸಂಖ್ಯೆಯ ಶೇಕಡಾ ೧೮.೮೫ರಷ್ಟು ಜನ ಈ ನಗರ ಪ್ರದೇಶದಲ್ಲಿ ವಾಸವಾಗಿದ್ದಾರೆ. ೨೪೨ ನಗರ ಮತ್ತು ಪಟ್ಟಣಗಳ ಪೈಕಿ ೧೮೧ ಪಟ್ಟಣಗಳಲ್ಲಿ ೨೦ ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯೂ ಮತ್ತು ೬೧ ಪಟ್ಟಣಗಳಲ್ಲಿ ೨೦ ಸಾವಿರಕ್ಕಿಂತ ಜಾಸ್ತಿ ಜನ ಸಂಖ್ಯೆ ಇವೆ. ಈ ಎಲ್ಲ ಪಟ್ಟಣಗಳ ಪೈಕಿ ೨೨೧ ಪಟ್ಟಣಗಳಿಗೆ ಈಗಾಗಲೇ ಜಲಮಂಡಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಉಳಿದ ೨೧ ಪಟ್ಟಣಗಳ ನೀರು ಸರಬರಾಜು ವ್ಯವಸ್ಥೆಯ ಕಾರ್ಯ ವಿವಿಧ ಹಂತದಲ್ಲಿದೆ.

ಇದುವರೆಗೆ ನೀರಿನ ಸರಬರಾಜು ವ್ಯವಸ್ಥೆ ಇರುವ ಪಟ್ಟಣಗಳಲ್ಲಿಯೂ ಸಹ ಸಾಕಾದಷ್ಟು ನೀರು ಈಗ ದೊರಕುತ್ತಿಲ್ಲ. ಪ್ರಕೃತಿಯ ಕೋಪ ಒಂದು ಕಾರಣ ಆದರೆ. ಬೆಳೆಯುತ್ತಿರುವ ಜನಸಂಖ್ಯೆ ಇನ್ನೊಂದು ಕಾರಣ. ಜಲಮೂಲಗಳು ಬತ್ತಿ ಹೋಗಿ ಪೂರೈಕೆಯಾಗುತ್ತಿದ್ದ ನೀರಿನ ಪ್ರಮಾಣ ಕಡಿಮೆ ಯಾಗುತ್ತಿದೆ. ಈ ಎಲ್ಲ ನಗರ ಪ್ರದೇಶಗಳ ಕುಡಿಯುವ ನೀರಿನ ಪೂರೈಕೆ ಮತ್ತು ಒಳಚರಂಡಿ ವ್ಯವಸ್ಥೆ ಕರ್ನಾಟಕ ರಾಜ್ಯದ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವ್ಯಾಪ್ತಿಗೆ ಬರುತ್ತದೆ.

ತಮ್ಮೆಲ್ಲರಿಗೆ ತಿಳಿದಿರುವಂತೆ ಕಳೆದ ಮಳೆಗಾಲದಲ್ಲಿ ಸರಿಯಾಗಿ ಮಳೆ ಬಾರದಿರಂದ ಬರಗಾಲ ನಮ್ಮ ರಾಜ್ಯದ ಹಲವೆಡೆಗಳಲ್ಲಿ ಆವರಿಸಿದೆ. ನಗರಾಡಳಿತ ಪ್ರದೇಶಗಳೂ ಕೂಡ ಈ ಬರಗಾಲಕ್ಕೆ ಹೊರತಾಗಿಲ್ಲ. ಬಹಳಷ್ಟು ನಗರ ಪ್ರದೇಶಗಳಲ್ಲಿ ಕುಡಯುವ ನೀರಿನ ಕೊರತೆ ಉಂಟಾಗಿದೆ. ಈ ತೀವ್ರ ಪರಿಸ್ಥಿತಿಯನು ಪುನರಂಡು ಮುಂಜಾಗರೂಕತೆಯಾಗಿ ಹಲವಾರು ಕ್ರಮಗಳನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ಜಲಮಂಡಳಿಯು ಸಂಬಂಧಪಟ್ಟ ಜಿಲ್ಲಾಧಿಕಾರಿಗಳೊಂದಿಗೆ ಸಮಾಲೋಚಿಸಿ ತುರ್ತು ಪರಿಹಾರ ಕ್ರಮಗಳಿಗಾಗಿ ಅಗತ್ಯವಾದ ಅಂದಾಜುಗಳನ್ನು ತಯಾರಿಸಲಾಗಿದೆ. ಈ ರೀತಿ ೧೨೧ ಪಟ್ಟಣಗಳಿಗೆ ಸಂಬಂಧಪಟ್ಟಂತೆ ಅಂದಾಜುಗಳು ಸರ್ಕಾರಕ್ಕೆ ಈಗಾಗಲೇ ತಲುಪಿವೆ.